# ಪಾವನಾ

## ರೋಲರ್ ಕೋಸ್ಟರ್ ಜರ್ನಿ

■ಪದ್ಮನಾಭ ಭಟ್



‘ಗೊಂಬೆಗಳ ಲವ್’ ಈ ಹೆಸರು ಹೇಳಿದಾಕ್ಷಣ ಒಂದು ಅಮಾಯಕ ಹುಡುಗಿಯ ಮುಖ ಕಣ್ಣೆದುರಿಗೆ ಬಂದು ನಿಲ್ಲುತ್ತದೆ. ಅವರು ಪಾವನಾ.

ಪಾವನಾಗೆ ಅವರ ಹೆಸರಿಗಿಂತ ಹೆಚ್ಚಿನ ಗುರ್ತು ನೀಡಿದ್ದು ‘ಗೊಂಬೆಗಳ ಲವ್’ ಸಿನಿಮಾದ ಪಾತ್ರ. ಈಗಲೂ ಅವರನ್ನು ಗುರ್ತಿಸುವುದು ಆ ಸಿನಿಮಾದ ಮೂಲಕವೇ! ಮೊದಲ ಸಿನಿಮಾದಲ್ಲಿಯೇ ಆ ಪರಿಯ ಗುರ್ತು ಪಡೆದುಕೊಂಡ ಈ ಅದೃಷ್ಟವಂತೆಯ ಅದೃಷ್ಟ, ನಂತರದ ದಿನಗಳಲ್ಲಿ ಉಜ್ವಲವೇನೂ ಆಗಲಿಲ್ಲ. ‘ಗೊಂಬೆಗಳ ಲವ್’ ಎಂಬ ವರ ಅವರ ಪಾಲಿಗೆ ಇನ್ನೊಂದು ಬಗೆಯಲ್ಲಿ ಶಾಪವೂ ಆಗಿದ್ದು ವಿಪರ್ಯಾಸ.

‘ಇಷ್ಟು ವರ್ಷಗಳ ಸಿನಿಮಾ ಜರ್ನಿ ಹೇಗಿತ್ತು’ ಎಂದು ಕೇಳಿದರೆ ‘ಅದೊಂಥರ ರೋಲರ್ ಕೋಸ್ಟರ್ ಜರ್ನಿ’ ಎಂದು ನಗುತ್ತಾರೆ ಪಾವನಾ. ಆ ನಗುವಿನ ಅಡಿಯಲ್ಲಿ ಇದ್ದ ಗಾಢವಾದ ವಿಷಾದವೂ ನಮ್ಮನ್ನು ತಟ್ಟದೇ ಇರದು.

‘ನನ್ನ ಸಿನಿಮಾ ಜರ್ನಿಯಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡಿದ್ದೇನೆ. ಇಳಿತವೇ ಹೆಚ್ಚಿತ್ತು; ಸ್ವಲ್ಪ ಏರಿಕೆಯೂ ಇದೆ’ ಎನ್ನುವ ಅವರ ತಮ್ಮ ಮಾತನ್ನು ಹೀಗೆ ವಿಸ್ತರಿಸುತ್ತಾರೆ: ‘ಗೊಂಬೆಗಳ ಲವ್ ಸಿನಿಮಾ ನನಗೆ ತುಂಬಾ ಹೆಸರು ತಂದುಕೊಟ್ಟಿತು. ಎಷ್ಟರಮಟ್ಟಿಗೆ ಹೆಸರು ಕೊಟ್ಟಿತೆಂದರೆ ಅಂಥ ಪಾತ್ರಗಳಿಗೆ ಮಾತ್ರ ನಾನು ಸೂಕ್ತ ಎನ್ನುವ ಬ್ರ್ಯಾಂಡ್ ಮಾಡಿಬಿಟ್ಟಿತು. ಪಾವನಾ ಎಂದರೆ ಪರ್ಫಾರ್ಮೆನ್ಸ್ ಓರಿಯಂಟೆಡ್ ಪಾತ್ರಗಳಿಗೆ ಮಾತ್ರ ಸೂಕ್ತ; ಕಮರ್ಷಿಯಲ್ ಸಿನಿಮಾಗಳಿಗೆ ಅವರು ಬೇಡ ಅನ್ನುವ ಮಟ್ಟಿಗೆ ಹೋಯಿತು. ನನ್ನ ಬಗ್ಗೆ ಎಲ್ಲೇ ಪ್ರಸ್ತಾಪ ಬಂದರೂ ‘ಆ ಹುಡುಗೀನಾ? ತುಂಬ ಚೆನ್ನಾಗಿ ಆ್ಯಕ್ಟ್ ಮಾಡ್ತಾಳೆ. ಬಟ್ ನಮ್ಮ ಕಮರ್ಷಿಯಲ್ ಸಿನಿಮಾಗೆ ಸೂಟ್ ಆಗಲ್ಲ’ ಎಂದು ಹೇಳಿ ನಿರಾಕರಿಸಲು ಶುರುಮಾಡಿದರು. ಹೋಗಲಿ, ಪರ್ಫಾರ್ಮೆನ್ಸ್ ಓರಿಯಂಟೆಡ್ ಸಿನಿಮಾಗಳನ್ನೇ ಮಾಡಿಕೊಂಡಿರೋಣ ಎಂದರೆ ಅಂಥ ಎಷ್ಟು ಸಿನಿಮಾಗಳು ನಮ್ಮಲ್ಲಿ ಬರುತ್ತವೆ? ಎಲ್ಲೋ ಐವತ್ತು ಕಮರ್ಷಿಯಲ್ ಸಿನಿಮಾಗಳ ಮಧ್ಯ ಒಂದು ಅಂಥ ಸಿನಿಮಾಗಳು ಬರುತ್ತವೆ. ಹೀಗಾಗಿ ನನಗೆ ಅವಕಾಶಗಳು ಕಡಿಮೆಯಾಗುತ್ತ ಹೋದವು’.

ಪ್ರತಿಭೆಯೇ ಶಾಪವಾಗಿದ್ದ ಪಾವನಾಗೆ ಈಗ ಶಾಪ ವಿಮೋಚನೆಯ ಗಳಿಗೆ ಹತ್ತಿರ ಬಂದ ಹಾಗಿದೆ. ನಿಧಾನವಾಗಿ ಕಮರ್ಷಿಯಲ್ ಸಿನಿಮಾಗಳೂ ಅವರನ್ನು ಅರಸಿಕೊಂಡು ಬರುತ್ತಿವೆ. ವಿನೋದ್ ಪ್ರಭಾಕರ್ ಅಭಿನಯದ ‘ಫೈಟರ್’ ಎಂಬ ಪಕ್ಕಾ ಕಮರ್ಷಿಯಲ್ ಸಿನಿಮಾದಲ್ಲಿ ಪಾವನಾ ನಾಯಕಿಯಾಗಿ ನಟಿಸಿದ್ದಾರೆ. ಜನವರಿಯಲ್ಲಿ ತೆರೆಕಾಣಲಿರುವ ‘ರುದ್ರಿ’ ಸಿನಿಮಾ ಕುರಿತು ಪಾವನಾಗೆ ವಿಶೇಷ ನಿರೀಕ್ಷೆ ಇದೆ. ಈ ಚಿತ್ರದಲ್ಲಿ ಅವರು ‘ಗೊಂಬೆಗಳ ಲವ್’ ಸಿನಿಮಾಗಿಂತ ಡಿ ಗ್ಲ್ಯಾಮರಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರಂತೆ.

‘ರುದ್ರಿ ಸಂಪೂರ್ಣವಾಗಿ ಉತ್ತರ ಕರ್ನಾಟಕದಲ್ಲಿ ನಡೆಯುವ ಕಥೆ. ಟೀವಿ, ಮೊಬೈಲ್ ಯಾವುದೂ ಇಲ್ಲದ ಅತ್ಯಂತ ಹಿಂದುಳಿದ ಹಳ್ಳಿಯಲ್ಲಿ ಒಬ್ಬ ಹೆಣ್ಣುಮಗಳು ಶೋಷಣೆಗೆ ಒಳಗಾದಾಗ ಅದರ ವಿರುದ್ಧ ಹೇಗೆ ಪ್ರತಿಭಟಿಸುತ್ತಾಳೆ, ತನ್ನ ಸಮಸ್ಯೆಯನ್ನು ಹೇಗೆ ಎದುರಿಸುತ್ತಾಳೆ ಎಂಬುದೇ ಈ ಕಥೆಯ ವಸ್ತು. ತುಂಬ ವರ್ಷಗಳ ನಂತರ ಪೂರ್ತಿಯಾಗಿ ಉತ್ತರ ಕರ್ನಾಟಕ ಭಾಷೆಯನ್ನು ಬಳಸಿ ಮಾಡಿರುವ ಸಿನಿಮಾ ಇದು’ ಎಂದು ಅವರು ಹೇಳಿಕೊಳ್ಳುತ್ತಾರೆ. ಮಂಡ್ಯದ ಹುಡುಗಿಯಾದ ಪಾವನಾ, ಉತ್ತರ ಕರ್ನಾಟಕದ ಪಾತ್ರ, ಭಾಷೆಗೆ ಒಗ್ಗಿಕೊಳ್ಳಲು ಸಾಕಷ್ಟು ತಯಾರಿಯನ್ನೂ ಮಾಡಿಕೊಂಡಿದ್ದರಂತೆ.

ಅವರು ನಟಿಸಿರುವ ಇನ್ನೊಂದು ಸಿನಿಮಾ, ಧನಂಜಯ್ ರಂಜನ್ ನಿರ್ದೇಶನದ ‘ಮೈಸೂರ್ ಡೈರೀಸ್’ ಇನ್ನೇನು ಬಿಡುಗಡೆಗೆ ಸಜ್ಜಾಗಿದೆ. ಹಾಗೆಯೇ ‘ಪ್ರಭುತ್ವ’, ‘ತೂತುಮಡಿಕೆ’ ಎಂಬ ಎರಡು ಸಿನಿಮಾಗಳಲ್ಲಿಯೂ ಅವರು ನಾಯಕಿಯಾಗಿ ನಟಿಸಿದ್ದಾರೆ.

‘ಗೊಂಬೆಗಳ ಲವ್’ ಸಿನಿಮಾ ಬದಲಿಗೆ ಬೇರೆ ಯಾವುದಾದರೂ ಕಮರ್ಷಿಯಲ್ ಸಿನಿಮಾಗಳಲ್ಲಿ ನಟಿಸಿದ್ದರೆ ನಿಮ್ಮ ಸಿನಿಮಾಜೀವನ ಬೇರೆ ಆಗಿರುತ್ತಿತ್ತು ಎಂದು ಯಾವತ್ತಾದರೂ ಅನಿಸಿದ್ದಿದೆಯೇ’ ಎಂದು ಕೇಳಿದರೆ ತುಂಬ ಖಚಿತವಾಗಿ ‘ನೆವರ್ ಎವರ್’ ಎನ್ನುತ್ತಾರೆ ಅವರು. ‘ನಾನು ಹತ್ತು ಹದಿನೈದು ಕಮರ್ಷಿಯಲ್ ಸಿನಿಮಾಗಳಲ್ಲಿ ನಟಿಸಿದ್ದರೆ ಸಿಗಬಹುದಾಗಿದ್ದ ಜನಪ್ರಿಯತೆ ಮೊದಲ ಸಿನಿಮಾದಲ್ಲಿಯೇ ಸಿಕ್ಕಿದೆ. ಹಾಗಿರುವಾಗ ನಾನ್ಯಾಕೆ ಬೇರೆ ಸಿನಿಮಾದಲ್ಲಿ ನಟಿಸಬೇಕಿತ್ತು ಎಂದು ಯೋಚಿಸಲಿ?’ ಎಂಬ ಅವರ ಮರುಪ್ರಶ್ನೆಯಲ್ಲಿಯೇ ಉತ್ತರವೂ ಅಡಗಿದೆ.

ಚಿತ್ರ: ಅಭಿಷೇಕ್ ಎಸ್.ಎನ್.